

بسم اللہ الرّحمٰن الرّحیم

# ಆರಾಧನೆಯಲ್ಲಿ ಅಭಿರುಚಿ ಉಂಟಾಗಲಿಕ್ಕಾಗಿ ಅಲ್ಲಾಹನೊಡನೆ ಪ್ರಾರ್ಥಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಮಸ್ಜಿದ್ ಫಝ್ಲ್'**ನಲ್ಲಿ **25-09-2015** ರಂದು ನೀಡಿದ **ಜುಮುಅ ಖುತ್‌ಬ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕೆಲವು ಜನರು ಕೇಳುತ್ತಾರೆ: ಆರಾಧನೆಯಲ್ಲಿ ಆಸಕ್ತಿ ಉಂಟುಮಾಡುವುದು ಹೇಗೆ? ನಾವು ಪ್ರಯತ್ನ ಮಾಡಿದರೂ ನಮಗೆ ಆರಾಧನೆಯಲ್ಲಿ ಆಸಕ್ತಿ ಉಂಟಾಗುವುದಿಲ್ಲ ಎಂದು ಹೇಳುತ್ತಾರೆ. ಇಲ್ಲಿ, ನೆನಪಿಡಬೇಕಾದುದೇನೆಂದರೆ ಅಲ್ಲಾಹನ ದಾಸನ ಕೆಲಸವು ಸ್ಥಿರಮನೋಭಾವದಿಂದ ಪ್ರಯತ್ನ ಮಾಡುತ್ತಾ ಇರುವುದಾಗಿದೆ. ನಮಗೆ ದೊರಕಬೇಕಾದುದು ಅಲ್ಲಾಹನಿಂದಲೇ ದೊರಕಬೇಕಾಗಿದೆ ಎಂಬ ದೃಢ ವಿಶ್ವಾಸವನ್ನು ಹೊಂದಿರಿ. ಆಗ ಎಂತಹ ಸ್ಥಿತಿ ಉಂಟಾಗುವುದೆಂದರೆ ಅದು ನಮ್ಮನ್ನು ಅಲ್ಲಾಹನ ಸಮೀಪವಾಗುವಂತೆ ಮಾಡುತ್ತದೆ. ಆಗ ಆರಾಧನೆ ಮಾಡುವ ಉತ್ಸಾಹ ವರ್ಧಿಸುತ್ತದೆ.

ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಬ್ಬರು ಕೇಳಿದರು: ಆರಾಧನೆಯಲ್ಲಿ ಅಭಿರುಚಿಯನ್ನು ಉಂಟುಮಾಡುವುದು ಹೇಗೆ? ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಸದಾಚಾರಗಳು ಮತ್ತು ಆರಾಧನೆಯಲ್ಲಿ ಆಸಕ್ತಿ ಉತ್ಸಾಹಗಳು ತಾನಾಗಿಯೇ ಉಂಟಾಗಲು ಸಾಧ್ಯವಿಲ್ಲ. ಮನುಷ್ಯನು "ನನ್ನಲ್ಲಿ ಈ ಆಸಕ್ತಿ ಉಂಟಾಗಲಿ. ನಾನು ನನ್ನ ಸ್ವಂತ ಪ್ರಯತ್ನದಿಂದ ಇಂತಹ ಉತ್ಸಾಹ ಉಂಟಾಗಲು ಪ್ರಯತ್ನಿಸುವೆನು" ಎಂದು ಹೇಳಿದರೆ ಅದು ಹಾಗೆ ಆಗಲಾರದು. ಅದು ಅಲ್ಲಾಹನ ಅನುಗ್ರಹ ಮತ್ತು ಅವನು ನೀಡುವ ಭಾಗ್ಯದಿಂದ ಲಭಿಸುತ್ತದೆ. ಆದುದರಿಂದ ಇದಕ್ಕೆ ಆವಶ್ಯಕವಾದುದೇನೆಂದರೆ ಮನುಷ್ಯನು ಗಾಬರಿಗೊಳ್ಳದೆ ಅನುಗ್ರಹ ಮತ್ತು ಭಾಗ್ಯ ದೊರಕಲು ಪ್ರಾರ್ಥಿಸುತ್ತಾ ಇರಬೇಕು. ಪ್ರಾರ್ಥನೆ ಮಾಡುತ್ತಾ ಬಳಲಿ ಸುಮ್ಮನೆ ಕುಳಿತುಕೊಳ್ಳಬಾರದು. ಸ್ಥಿರಚಿತ್ತನಾಗಿ ಪ್ರಾರ್ಥನೆ ಮಾಡುತ್ತಲೇ ಇರಬೇಕು. ಆ ಪ್ರಾರ್ಥನೆಗಳನ್ನು ಮಾಡುತ್ತಾ ಬಳಲಬಾರದು. ಮನುಷ್ಯನು ಹೀಗೆ ಸ್ಥಿರಚಿತ್ತತೆಯಿಂದ ಪ್ರಾರ್ಥನೆಗಳನ್ನು ಮಾಡುತ್ತಾ ಮುಂದುವರಿದರೆ ಕೊನೆಗೆ ಅಲ್ಲಾಹನು ತನ್ನ ಅನುಗ್ರಹದಿಂದ ಮನುಷ್ಯನು ಯಾವ ವಿಷಯದ ಬಗ್ಗೆ ಹೃತ್ಪೂರ್ವಕ ಅಭಿಲಾಷೆ ಹೊಂದಿದ್ದನೋ ಅದನ್ನು ದಯಪಾಲಿಸುವನು. ಎಂದರೆ ಆರಾಧನೆ ಬಗ್ಗೆ ಒಂದು ಆಸಕ್ತಿ, ಉತ್ಸಾಹ ಮತ್ತು ಅಭಿರುಚಿ ಉಂಟಾಗಲು ತೊಡಗುವುದು. ಆರಾಧನೆಯ ಸಿಹಿಯನ್ನು ಅವನು ಗಳಿಸಲು ತೊಡಗುವನು. ಅವನಿಗೆ ಅದರಲ್ಲಿ ಒಂದು ರಸಾಸ್ವಾದನೆ ಉಂಟಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಒಬ್ಬ ವ್ಯಕ್ತಿ ಯಾವುದೇ ಪರಿಶ್ರಮ ಮತ್ತು ಪ್ರಯತ್ನ ಮಾಡದೆ ಯಾರಾದರೂ ನನ್ನ ಮೇಲೆ ಊದಿ ನಾನು ಅಲ್ಲಾಹನ ಸಾಮೀಪ್ಯಗಳಿಸುವಂತೆ ಮಾಡುವನು, ಅಥವಾ ಆರಾಧನೆಯಲ್ಲಿ ಉತ್ಸಾಹ ಉಂಟಾಗುವಂತೆ ಮಾಡುವನು ಎಂದು ಭಾವಿಸಿ ಯಾರನ್ನಾದರೂ ಸಮೀಪಿಸಿದರೆ, ಆ ವ್ಯಕ್ತಿ ಅವನನ್ನು ಭಕ್ತನನ್ನಾಗಿ ಮಾಡುವನು ಎನ್ನುವುದು ಅಸಾಧ್ಯವಾಗಿದೆ. ಇದು ಅಲ್ಲಾಹನ ನಿಯಮ ಮತ್ತು ನಡೆವಳಿಕೆ ಪ್ರಕಾರ ಸಂಭವನೀಯವಲ್ಲ. ಈ ರೀತಿ ಅಲ್ಲಾಹನನ್ನು ಪರೀಕ್ಷಿಸುವವನು ಅಲ್ಲಾಹನನ್ನು ಅಪಹಾಸ್ಯ ಮಾಡುತ್ತಾನೆ. ಕೊನೆಗೆ ಅವನು ನಾಶವಾಗುತ್ತಾನೆ. ಎಂದರೆ ಅವನು ಅಲ್ಲಾಹನಿಂದ ದೂರವಾಗುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಮನುಷ್ಯನ ಹೃದಯ ಅಲ್ಲಾಹನ ಕೈಗಳಲ್ಲಿದೆ. ಅಲ್ಲಾಹನ ಅನುಗ್ರಹವಿಲ್ಲದಿದ್ದರೆ ಒಬ್ಬನು ಮರುದಿನ ಹೋಗಿ ಕ್ರೈಸ್ತನಾಗಬಹುದು. ಇಸ್ಲಾಮ್‌ನಿಂದ ಬೇರ್ಪಟ್ಟು ಧರ್ಮ ರಹಿತನಾಗಲೂಬಹುದು. ಧರ್ಮದಿಂದ ದೂರ ಸರಿದು ಹೋಗಬಹುದು. ಆದುದರಿಂದ ಪ್ರತಿಯೊಂದು ಸಮಯದಲ್ಲಿಯೂ ಅಲ್ಲಾಹನ ಅನುಗ್ರಹ ಪಡೆಯಲು ಪ್ರಾರ್ಥಿಸುತ್ತಾ ಇರಬೇಕು. ಅವನಿಂದ ಸಹಾಯವನ್ನು ಬೇಡಿಕೊಳ್ಳುತ್ತಾ ಇರಬೇಕು. ಅವನ ನೆರವನ್ನು ಅಪೇಕ್ಷಿಸುತ್ತಾ ಇರಬೇಕು. ಅವನು ನಿಮ್ಮನ್ನು ನೇರಮಾರ್ಗದಲ್ಲಿ ಸ್ಥಿರವಾಗಿರಿಸಲಿಕ್ಕಾಗಿ ಅವನ ಸಹಾಯ ಯಾಚಿಸುತ್ತಲೇ ಇರಬೇಕು. ಅಲ್ಲಾಹನನ್ನು ನಿರ್ಲಕ್ಷಿಸುವವನು ಶೈತಾನ್ ಆಗುತ್ತಾನೆ. ಎಲ್ಲಿ ಅಲ್ಲಾಹನನ್ನು ನಿರ್ಲಕ್ಷಿಸಲಾಗುತ್ತಿದೆಯೋ ಎಲ್ಲಿ ಅಲ್ಲಾಹನನ್ನು ಬಿಟ್ಟು ಬಿಡಲಾಗುತ್ತಿದೆಯೋ ಎಲ್ಲಿ ಅಲ್ಲಾಹನನ್ನು ಮರೆತು ಬಿಡುತ್ತಾರೋ ಅಲ್ಲಿ ಶೈತಾನನು ಆಕ್ರಮಣ ಮಾಡುತ್ತಾನೆ ಮತ್ತು ಅವರು ಶೈತಾನ್ ಆಗುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಆದುದರಿಂದ ಮನುಷ್ಯನು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಹಾಗೆ ಪ್ರಾರ್ಥಿಸಿದರೆ ಮನುಷ್ಯನನ್ನು ನಾಶಮಾಡುವ ವಿಷ ನಿವಾರಣೆಯಾಗುತ್ತದೆ. ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಹಾಗೆ ಮಾಡಿದರೆ ಶೈತಾನನಿಗೆ ಸಮೀಪವಾಗುವಂತೆ ಮಾಡುವ ವಿಷದಿಂದ, ಮನುಷ್ಯನನ್ನು ನಾಶಮಾಡುವ ವಿಷದಿಂದ ರಕ್ಷಣೆ ಪಡೆಯಬಹುದು.

ಆದುದರಿಂದ, ಸ್ಥಿರಚಿತ್ತತೆ ಲಭಿಸಬೇಕಾದರೆ ಅಲ್ಲಾಹನ ಹೊರತು ಬೇರೆ ಯಾರೂ ಇಲ್ಲ ಎಂದು ದೃಢ ವಿಶ್ವಾಸ ಹೊಂದುವುದು ಶರತ್ತಾಗಿದೆ. ಇತರ ಎಲ್ಲ ಮಾರ್ಗಗಳನ್ನು ಮುಚ್ಚಿಕೊಂಡು ಮನುಷ್ಯನು ಅಲ್ಲಾಹನ ಕಡೆಗೆ ಬಾಗಿದರೆ,

ಆಗ ಆರಾಧನೆಯಲ್ಲಿ ಸಹ ಉತ್ಸಾಹ ಉಂಟಾಗುವಂತಹ ಸ್ಥಿತಿ ಉದ್ಭವಿಸುತ್ತದೆ. ಸ್ಥಿರವಾಗಿ ಅಲ್ಲಾಹನ ಕಡೆಗೆ ಬಾಗುವುದು ಆವಶ್ಯಕವಾಗಿದೆ. ಅಲ್ಲಾಹನಿಂದ ಸ್ಥಿರವಾಗಿ ಸಹಾಯ ಬೇಡಿಕೊಳ್ಳುತ್ತಾ ಇರಬೇಕಾಗಿದೆ. ಶೈತಾನನು ಪ್ರತಿ ಹೊತ್ತು ಆಕ್ರಮಣ ಮಾಡಲು ಸಿದ್ಧನಾಗಿರುತ್ತಾನೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿರುವರು. ಈ ಉತ್ಸಾಹ ಮತ್ತು ಆಸಕ್ತಿ ಉಂಟಾಗಲು ಇಸ್ತಿಗ್‌ಫಾರ್ ಪ್ರಾರ್ಥನೆ ಸಹ ಮಾಡಬೇಕಾದುದು ಆವಶ್ಯಕವಾಗಿದೆ. ಶೈತಾನನ ಆಕ್ರಮಣದಿಂದ ರಕ್ಷಣೆ ಪಡೆಯಲು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುವುದು ಬಹಳ ಆವಶ್ಯಕವಾಗಿದೆ. ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಿ ಮನುಷ್ಯನು ಶೈತಾನನನ್ನು ತನ್ನ ಸಮೀಪದಿಂದ ದೂರಕ್ಕೆ ಓಡಿಸುವಾಗ ಅಲ್ಲಾಹನ ಆಶ್ರಯ ಪಡೆಯಲು ಹೃತ್ಪೂರ್ವಕವಾಗಿ ನೊಂದು ಪ್ರಾರ್ಥಿಸಲು ಸಹ ತೊಡಗುವನು. ಆಗ ಇಸ್ತಿಗ್‌ಫಾರ್ ಸಹ ವೇಧನೆಯಿಂದ ಕೂಡಿರುತ್ತದೆ. ಆಗ ಅವನು ಅಲ್ಲಾಹನ ಸಾಮೀಪ್ಯಗಳಿಸಲು ಇನ್ನಷ್ಟು ಮಾರ್ಗಗಳನ್ನು ಹುಡುಕಲು ಪ್ರಾರ್ಥನೆಗಳನ್ನು ಮಾಡುತ್ತಾ ಇರುವನು. ಮನುಷ್ಯನು ಈ ಸ್ಥಿತಿಗೆ ತಲಪುವಾಗ ಅಲ್ಲಾಹನು ತನ್ನ ಅನುಗ್ರಹಗಳನ್ನು ಅವನ ಮೇಲೆ ಸುರಿಸುವನು.

ಅಲ್ಲಾಹನು ನಮಗೆ ಅವನ ಯಥಾರ್ಥ ದಾಸರಾಗಲು ಮತ್ತು ಸತ್ಕರ್ಮಗಳನ್ನು ಮಾಡಲು ಭಾಗ್ಯ ನೀಡಲಿ. ಮತ್ತು ಸ್ಥಿರಚಿತ್ತತೆಯಿಂದ ಅದರಲ್ಲಿ ನೆಲೆನಿಲ್ಲಲು ಸಹ ಭಾಗ್ಯ ದಯಪಾಲಿಸಲಿ – ಆಮೀನ್.

---------------*****---------------

*Friday Sermon delivered by Hadrath Khaleefatul Masih Al Khamis (atba)*

*at Masjid Fazal, London on 25-09-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon